**ನವೆಂಬರ್ 14, 2016**

**ಗ್ರಾಹಕರು ಅವರ ಖಾತೆಯಿಂದ ರೂ. 24000/- ಹಿಂಪಡೆಯಲು ಡಿ ಸಿ ಸಿ ಬಿ ಬ್ಯಾಂಕುಗಳು ತನ್ನ ಗ್ರಾಹಕರಿಗೆ ಅನುವು ಮಾಡಿಕೊಡಬಹುದು : ಆರ್ ಬಿ ಐ**

ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳು ತನ್ನ ಅಸ್ತಿತ್ವದಲ್ಲಿರುವ ಗ್ರಾಹಕರಿಗೆ ಪ್ರತಿ ವಾರ ರೂ. 24000/- ತಮ್ಮ ಖಾತೆಯಿಂದ ತೆಗೆಯಲು ಅನುಮತಿ ನೀಡಬಹುದು ಎಂದು ಆರ್ ಬಿ ಐ ಇಂದು ಸ್ಪಷ್ಟ ಪಡಿಸಿದೆ. ಈ ಸೌಲಭ್ಯವು ನವಂಬರ್ 24, 2016 ರ ವರೆಗೆ ಲಭ್ಯವಿರುತ್ತದೆ. ನಿರ್ದಿಷ್ಟ ಪಡಿಸಿದ ಬ್ಯಾಂಕ್ ನೋಟುಗಳ (ರೂ. 500 ಹಾಗೂ ರೂ. 1000) ವಿಮಿಮಯ ಅಥವಾ ಜಮಾ ಸೌಲಭ್ಯವನ್ನು ಈ ಬ್ಯಾಂಕುಗಳು ನೀಡುವಂತಿಲ್ಲ. ಅಗತ್ಯಕ್ಕನುಸಾರವಾಗಿ ತಮ್ಮ ಖಾತೆಗಳಿಂದ ಹಣ ತೆಗೆಯಲು ಗ್ರಾಹಕರಿಗೆ ಪರವಾನಗಿ ನೀಡುವಂತೆ ಆರ್ ಬಿ ಐ ಎಲ್ಲ ಡಿ ಸಿ ಸಿ ಬಿ ಬ್ಯಾಂಕು ಗಳಿಗೆ ಸಲಹೆ ನೀಡಿದೆ. ಡಿ ಸಿ ಸಿ ಬಿ ಬ್ಯಾಂಕು ಗಳಿಗೆ ವಾರಕ್ಕೆ ಅನ್ವಯವಾಗುವ ರೂ. 24000/- ರ ನಗದು ವಾಪಸಾತಿ ಮಿತಿಯು ಇತರೆ ಬ್ಯಾಂಕು ಗಳಿಗೆ ಅನ್ವಯವಾಗುವುದಿಲ್ಲ.

**ಪತ್ರಿಕಾ ಪ್ರಕಟಣೆ : 2016-2017/1198**

ಅಲ್ಪನ ಕಿಲ್ಲಾವಾಲಾ
ಪ್ರಧಾನ ಸಲಹೆಗಾರರು